

ಹಾವು ಎಂದರೆ ಕನಸಿನಲ್ಲೂ ಹೌಹಾರುವವರೇ ಹೆಚ್ಚು. ಆದರೆ, ಶ್ರೀರಂಗಪಟ್ಟಣದ ಸ್ನೇಕ್ ಸುಲ್ತಾನ್ ಅವರಿಗೆ ಹಾವುಗಳೆಂದರೆ ಆಟಿಕೆಗಳಿದ್ದಂತೆ; ವಿಷಪೂರಿತ ಹಾವುಗಳನ್ನು ಅವರು ಬರಿಗೈಲಿ ಹಿಡಿದು ಅಚ್ಚರಿ ಮೂಡಿಸುತ್ತಾರೆ.

ಸ್ನೇಕ್ ಸುಲ್ತಾನ್ ವೃತ್ತಿಯಿಂದ ಆಟೊ ಚಾಲಕರು. ಕಳೆದ 10 ವರ್ಷಗಳಿಂದ ಹಾವುಗಳನ್ನು ಹಿಡಿಯುತ್ತಿದ್ದಾರೆ. ಮಹಮದ್ ಗೌಸ್ ಎಂಬುದು ಇವರ ಮೂಲ ಹೆಸರಾದರೂ, ಹಾವು ಹಿಡಿಯುವ ಹವ್ಯಾಸ ಇರುವ ಕಾರಣಕ್ಕೆ 'ಸ್ನೇಕ್ ಸುಲ್ತಾನ್' ಎಂದೇ ಹೆಸರಾಗಿದ್ದಾರೆ. ಕಾಲೇಜು ದಿನಗಳಲ್ಲಿ ಈ ಹವ್ಯಾಸ ರೂಢಿಸಿಕೊಂಡ ಅವರು ಇದುವರೆಗೆ 500ಕ್ಕೂ ಹೆಚ್ಚು ಹಾವುಗಳನ್ನು ಹಿಡಿದು ರಕ್ಷಿಸಿದ್ದಾರೆ. ಜನವಸತಿ ಪ್ರದೇಶ, ತೋಟಗಳಲ್ಲಿ ಕಾಣಿಸಿಕೊಳ್ಳುವ ಹಾವುಗಳನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಡುತ್ತಾರೆ.

ಅತ್ಯಂತ ಅಪಾಯಕಾರಿ ಎನಿಸಿರುವ ಕಾಳಿಂಗ ಸರ್ಪ, ನಾಗರಹಾವು, ಕಟ್ಟಾವು, ಕೊಳಕುಮಂಡಲಗಳಂತಹ ಹಾವುಗಳನ್ನು ಸುಲ್ತಾನ್ ಅನೇಕ ಬಾರಿ ಹಿಡಿದಿದ್ದಾರೆ. ಜನರಿಂದ ಕರೆಬಂದ ಕೂಡಲೇ ದೌಡಾಯಿಸಿ ಬರುವ ಅವರು, ಚಾಣಾಕ್ಷತೆಯಿಂದ ಹಾವುಗಳನ್ನು ಹಿಡಿದು ಬುಟ್ಟಿಗೆ ಹಾಕಿಕೊಳ್ಳುತ್ತಾರೆ.

ಆರಂಭದಿಂದಲೂ ಪ್ರಾಣಿ ಪ್ರೇಮ ಹೊಂದಿದ್ದ ಸುಲ್ತಾನ್ ಮೈಸೂರಿನಲ್ಲಿ ಡಿಪ್ಲೊಮಾ ಓದುವಾಗ ಒಮ್ಮೆ ಅವರ ಗೆಳೆಯ ನಾಗರಹಾವೊಂದನ್ನು ಹಿಡಿದು ಕೈಯಲ್ಲಿ ಕೊಟ್ಟಿದ್ದರು. ಅಂದಿನಿಂದ ಹಾವು ಹಿಡಿಯುವ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಆ ಗೆಳೆಯನ ಜೊತೆ ಹಾವು ಹಿಡಿಯುವ ಕಾಯಕ ಮುಂದುವರಿಸಿ ಅದರಲ್ಲಿ ಪಳಗಿದರು. ಕಾಲಾನಂತರದಲ್ಲಿ ಸ್ವತಃ ಅವರೇ ಹಾವು ಹಿಡಿಯುವ ಹವ್ಯಾಸವನ್ನು ಬೆಳೆಸಿಕೊಂಡು ಬಂದಿದ್ದಾರೆ. ಈವರೆಗೆ ನೂರಾರು ವಿವಿಧ ಜಾತಿಯ ಹಾವುಗಳನ್ನು ಹಿಡಿದಿದ್ದರೂ ಕೊಡಗು ಜಿಲ್ಲೆಯ ಭಾಗಮಂಡಲದ ಕಾಫಿತೋಟದಲ್ಲಿ ಕಾಳಿಂಗಸರ್ಪವನ್ನು ಹಿಡಿಯಲು ಎರಡು ದಿನ ಶ್ರಮಪಟ್ಟಿದ್ದು ತಮ್ಮ ಜೀವನದಲ್ಲಿ ಮರೆಯದ ಘಟನೆ ಎನ್ನುತ್ತಾರೆ ಅವರು.

ಹೆಬ್ಬಾವು, ಕೇರೆ ಹಾವು, ಹಸಿರು ಹಾವು, ನೀರಾವು, ಆಭರಣದ ಹಾವು, ತೋಳದ ಹಾವು, ಬಿಲ್ಲುರಿ ಹಾವು, ಮಣ್ಣು ಮುಕ್ಕ (ಸ್ಯಾಂಡ್ ಬೋವಾ) ಸೇರಿದಂತೆ ವಿವಿಧ ಜಾತಿಯ ಹಾವುಗಳನ್ನು ಸ್ನೇಕ್ ಸುಲ್ತಾನ್ ಹಿಡಿದು ರಕ್ಷಿಸಿದ್ದಾರೆ. ತಾವು ಹಿಡಿದ ಹಾವುಗಳನ್ನು ಅವುಗಳಿಗೆ ಆಹಾರ ಸಿಗುವ ಜಾಗವನ್ನು ಗುರುತಿಸಿ, ಸುರಕ್ಷಿತ ಸ್ಥಳ ಎಂಬುದನ್ನು ಖಚಿತಪಡಿಸಿಕೊಂಡು ಬಿಟ್ಟುಬರುತ್ತಾರೆ. ಮೂರು ವರ್ಷಗಳ ಹಿಂದೆ ಕಾವೇರಿ ನದಿ ತೀರದ ಚಿಕ್ಕಪಾಳ್ಯ ಬಳಿ ತಾವು ರಕ್ಷಿಸಿದ ಒಂದು ಹೆಬ್ಬಾವನ್ನು ಮೈಸೂರು ಮೃಗಾಲಯಕ್ಕೆ ನೀಡಿದ್ದಾರೆ. ಸಾಕಷ್ಟು ಹಾವುಗಳನ್ನು ಬಂಡೀಪುರ, ಕರಿಘಟ್ಟ, ಮಲೆ ಮಹದೇಶ್ವರ ಬೆಟ್ಟಗಳಲ್ಲಿ ಬಿಟ್ಟು ಬಂದಿದ್ದಾರೆ.

ಎರಡು ವರ್ಷಗಳ ಹಿಂದೆ ಹಿಡಿದ ಕೊಳಕು ಮಂಡಲ ಹಾವನ್ನು ಕಾಡಿಗೆ ಬಿಡುವ ವೇಳೆ ಅದು ಸ್ನೇಕ್ ಸುಲ್ತಾನ್‌ರನ್ನು ಕಚ್ಚಿತ್ತು. ಅಸ್ವಸ್ಥರಾಗಿದ್ದ ಅವರು ಆಸ್ಪತ್ರೆಯಲ್ಲಿ ವಾರಗಟ್ಟಲೆ ಚಿಕಿತ್ಸೆ ಪಡೆದಿದ್ದರು. ಹಾವು ಕಚ್ಚಿದ್ದರಿಂದ ಅವರ ಬಲಗೈ ಬೆರಳಿನ ತುಸು ಭಾಗವನ್ನೇ ಕಳೆದುಕೊಂಡಿದ್ದಾರೆ. ಆದರೂ ಹಾವು ಹಿಡಿಯುವ ಪ್ರವೃತ್ತಿಯನ್ನು ಅವರು ಬಿಟ್ಟಿಲ್ಲ. ಬಿಡುವು ಸಿಕ್ಕರೆ ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹಾವುಗಳ ಬಗ್ಗೆ ಪರಿಚಯ ಮಾಡಿಕೊಡುತ್ತಾರೆ.

'ಹಾವುಗಳು ಪರಿಸರದ ಅವಿಭಾಜ್ಯ ಅಂಗ. ಬೆಳೆಗಳನ್ನು ಹಾಳು ಮಾಡುವ ಇಲಿ, ತೋಡಗಳನ್ನು ತಿಂದು ರೈತನಿಗೆ ಉಪಕಾರ ಮಾಡುತ್ತವೆ. ಅವು ನಿಜಕ್ಕೂ ನಿರುಪದ್ರವಿ. ತಮ್ಮ ಜೀವಕ್ಕೆ ಅಪಾಯ ಎದುರಾದರೆ ಮಾತ್ರ ಕಚ್ಚುತ್ತವೆ. ಹಾಗಾಗಿ ಅವುಗಳನ್ನು ಕೊಲ್ಲಬಾರದು' ಎಂಬ ಸಂದೇಶ ಸ್ನೇಕ್ ಸುಲ್ತಾನ್ ಅವರದ್ದು.

ಸ್ನೇಕ್ ಸುಲ್ತಾನ್
**ಸಂಪರ್ಕ ಸಂಖ್ಯೆ: 98443 25617.**